ತೆಂಗಿನ ತೇವಾಂಶ ತೆಗೆಯುವ ಉದ್ಯಮ ಸಂಕಷ್ಟದಲ್ಲಿರುವುದು

843 (855) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೆಂಗಿನ ಕೊಬ್ಬರಿಯಿಂದ ಪುಡಿ ಮಾಡುವ ಎಣ್ಣೆ ತೆಗೆಯುವ ಘಟಕಗಳು ತಟಸ್ಥವಾಗಿರುವ ಸಂಗತಿ ರಾಜ್ಯದಲ್ಲಿ ಬೆಳಕಿಗೆ ಬಂದಿದೆಯೆ?

ಆ) ಇದಕ್ಕೆ ಮಾರಾಟ ತೆರಿಗೆಯನ್ನು ಜಾತ್ತಿ ಮಾಡಿರುವುದೇ ಕಾರಣವಾಗಿದತಯೆ; ಹೇಗೆ?

ಇ) ರಾಜ್ಯದಲ್ಲಿ ತೆಂಗಿನ ಎಣ್ಣೆ ಇಂಗಿಸುವ ಉದ್ಯಮಗಳು ಎಷ್ಟಿವೆ; ವಾರ್ಷಿಕ ಎಷ್ಟು ಟನ್ ಕೊಬ್ಬರಿ ಪುಡಿ ಮಾಡುವ ಸಾಮರ್ಥ್ಯ ಹೊಂದಿವೆ?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಬಂದಿಲ್ಲ

ಆ) ಅನ್ವಯಿಸುವುದಿಲ್ಲ

ಇ) ರಾಜ್ಯದಲ್ಲಿ 80 ತೆಂಗಿನ ತೇವ ಇಳಿಸುವ ಕೈಗಾರಿಕೆಗಳಿವೆ, ಇವುಗಳ ಸಾಮರ್ಥ್ಯದ ವಿವರಗಳು ಲಭ್ಯವಿಟುವುದಿಲ್ಲ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಖಾಲಿ ಇರುವ ಪೌರ ಕಾರ್ಮಿಕರ ಹುದ್ದೆಗಳು

844 (1170) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಮಹಾನಗರಪಾಲಿಕೆ, ನಗರಸಭೆ ಮತ್ತು ಪುರಸಭೆಗಳಲ್ಲಿರುವ ಪೌರ ಕಾರ್ಮಿಕರ ಹುದ್ದೆಗಳು ಎಷ್ಟು (ವಿವರಗಳನ್ನು ನೀಡುವುದು)

ಆ) ಪೌರ ಕಾರ್ಮಿಕರ ಹುದ್ದೆಗಳು ಖಾಲಿಯಿರುವುದರಿಂದ ಸದರಿ ಸಂಸ್ಥೆಗಳ ಆಡಳಿತಕ್ಕೊಳಪಟ್ಟ ಪ್ರದೇಶಗಳಲ್ಲಿ ಶುಚಿತ್ವ ಕಾಪಾಡುವಲ್ಲಿ ಉದ್ಭವಿಸಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪೌರ ಕಾರ್ಮಿಕರ ವಿವರಗಳನ್ನು ಈ ಕೆಳಕಂಡಂತೆ ನೀಡಿದೆ:-

ಮಂಗಳೂರು ಮಹಾನಗರಪಾಲಿಕೆ	ಮಂಜೂರಾದ ಹುದ್ದೆ	ಖಾಲಿಯಿರುವ ಹುದ್ದೆ
	415	86
ದಕ್ಷಿಣ ಕನ್ನಡ ಜಿಲ್ಲೆ		
1. ಪುತ್ತೂರು ಪುರಸಭೆ	30	04
2. ಮೂಡಬಿದ್ರೆ ಪುರಸಭೆ	10	03
3. ಉಳ್ಳಾಲ ಪಟ್ಟಣ ಪಂಚಾಯತಿ	03	03
4. ಬಂಟ್ವಾಳ ಪಟ್ಟಣ ಪಂಚಾಯತಿ	13	05
5. ಮೂಲ್ಕಿ ಪಟ್ಟಣ ಪಂಚಾಯತಿ	10	-
6. ಸುಳ್ಯ ಪಟ್ಟಣ ಪಂಚಾಯತಿ	02	01
7. ಬೆಳ್ತಂಗಡಿ ಪಟ್ಟಣ ಪಂಚಾಯತಿ	04	01
ಉಡುಪಿ ಜಿಲ್ಲೆ		
1. ನಗರಸಭೆ ಉಡುಪಿ	75	17
2. ಕಾರ್ಕಳ ಪುರಸಭೆ	17	08
3. ಕುಂದಾಪುರ ಪುರಸಭೆ	26	07
4. ಸಾಲಿಗ್ರಾಮ ಪುರಸಭೆ	10	07
ಒಟ್ಟು ಹುದ್ದೆ	**615**	**ಖಾಲಿ ಹುದ್ದೆ 144**

ಆ) ಪೌರ ಕಾರ್ಮಿಕರ ಸಂಖ್ಯೆ ಕಡಿಮೆ ಬಿದ್ದು, ನೈರ್ಮಲ್ಯದ ಕೆಲಸ ನಿರ್ವಹಿಸುವುದು ಲಭ್ಯವಿರುವ ಪೌರ ಕಾರ್ಮಿಕರಿಂದ ಸಾಧ್ಯವಿಲ್ಲವೆಂದು ಕಂಡುಬಂದಲ್ಲಿ ಅಂತಹ ಬಡಾವಣೆಗಳಲ್ಲಿ ನೈರ್ಮಲ್ಯ ಶುಚೀಕರಣ ಕೆಲಸವನ್ನು ಖಾಸಗಿ ಗುತ್ತಿಗೆದಾರರಿಗತ ಟೆಂಡರ್ ಮೂಲಕ ವಹಿಸಿ ನಿರ್ವಹಿಸಲು ಕ್ರಮವಹಿಸಲಾಗುವುದು.

ಇ) ಪ್ರಶ್ನೆ 'ಅ'ಕ್ಕೆ ಉತ್ತರಿಸಿರುವಂತೆ

ರಾಜ್ಯದಲ್ಲಿ ಗ್ರಾನೈಟ್ ಉದ್ದಿಮೆಗಳ ಪರವಾನಿಗೆ

846 (1177) ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?